
ಸಮಗ್ರ ಕುಟುಂಬಕ್ಕೆ ಸಮೃದ್ಧ ಸಾಪ್ತಾಹಿಕ * ಸೆಪ್ಟೆಂಬರ್ 19, 2024 ₹25

# ತರಂಗ



## ಸಂತೃಪ್ತ ದಾಂಪತ್ಯಕ್ಕಾಗಿ ಸತ್‌ಸಂತಾನಕ್ಕಾಗಿ

# ವಾಜೀಕರಣ ಚಿಕಿತ್ಸೆ

ಅತಿ ದುಬಾರಿ, ಐಷಾರಾಮಿ ಪಾದರಕ್ಷೆಗಳು

**ಕಥೆ**

ಮೂಲ ಮಲೆಯಾಳಂ ▢ ಇ. ಹರಿಕುಮಾರ್
ಕನ್ನಡಕ್ಕೆ ▢ ಜೆಸ್ಸಿ ಎಲಿಜಬೆತ್ ಜೋಸೆಫ್

# ಸಾವು

> *ಶವಸುಟ್ಟ ಬೂದಿಯಲ್ಲಿ ಹುಡುಕಾಡುವಾಗ ದೊರೆತ ಕೈ ಮೂಳೆ ಅಮ್ಮನ ಮೃದು-ಮಧುರ ಸ್ಪರ್ಶವನ್ನು ನೆನಪಿಸಿತು!*

**ಮಾ**ವಿನ ಮರ ಕಡಿಯುವ ಶಬ್ದ ಈಗಲೂ ನನ್ನ ನೆನಪಿನಲ್ಲಿದೆ. ನಾನಾಗ ಎಂಟೋ, ಒಂಬತ್ತೋ ವಯಸ್ಸಿನವನಾಗಿದ್ದೆ. ನಾನು ಕೆಲವು ನಿಮಿಷಗಳ ಮೊದಲು ಆಶ್ರಯ ಪಡೆದಿದ್ದ ಹೊರಗಿನ ಕೋಣೆಯ ಕಿಟಕಿಯ ಮೂಲಕ ನೋಡುತ್ತಿದ್ದೆ. ಇಲ್ಲಿಂದ ಮರಣ ದೂರದಲ್ಲಿದೆ. ಮೂರು ಕೋಣೆಗಳೂ, ಒಂದು ವೆರಾಂಡವೂ ದೂರದಲ್ಲಿದೆ. ಚಾತ್ತ ಹಾಗೂ ಕೋತ ಇಬ್ಬರೂ ಆಚೆಯೂ ಈಚೆಯೂ ನಿಂತು ಕೊಡಲಿಯಿಂದ ಬಲವಾಗಿ ಬೀಸಿ ಕಡಿಯುತ್ತಿದ್ದರು. ಚಾತ್ತ ಕಡಿದು ಕೊಡಲಿ ತೆಗೆದೊಡನೆಯೇ, ಕೋತನ ಕೊಡಲಿಯ ಪೆಟ್ಟು ಬೀಳುತ್ತಿತ್ತು. ಮಾವಿನ ಮರದ ಬಿಳಿಯ ಚಿಕ್ಕ ಚಿಕ್ಕ ಸೀಳುಗಳು ಹಾರುತ್ತಿದ್ದವು. ಕೊಡಲಿ ಮಾವಿನ ಮರದ ಮೇಲೆ ಬೀಳುವ ಆ ಶಬ್ದವು, ಒಂದು ರೀತಿ ಭಯ ಹುಟ್ಟಿಸುವ ತಾಳದೊಂದಿಗೆ ಮುಂದುವರಿಯಿತು. ಮಾವಿನ ರೆಂಬೆಗಳನ್ನೆಲ್ಲಾ ಕಡಿಯಲಾಯಿತು. ಇನ್ನು ಕಾಂಡ ಮಾತ್ರವೇ ಉಳಿದಿತ್ತು. ಒಂದೊಂದು ಪೆಟ್ಟಿಗೂ ಮಾವಿನ ಮರ ನಲುಗುತ್ತಿತ್ತು.

ಹೊತ್ತು ಬೆಳಗಾಗಿತ್ತು. ಏಳು ಗಂಟೆಯಾದರೂ ಆಗಿದ್ದಿರಬಹುದು. ಅಜ್ಜಿ ಹನ್ನೆರಡು ಗಂಟೆಗೆ ಮರಣಿಸಿದ್ದರು. ರಾತ್ರಿಯೇ ಮಾವಿನ ಮರ ಕಡಿಯುವ ವಿಚಾರವನ್ನು ಯಾರೋ ಹೇಳಿದಾಗ ಅಪ್ಪು ನಾಯರ್ ಹೀಗೆ ಹೇಳಿದ್ದರು.

"ಬೆಳಗಾಗಲಿ. ಈಗ ಮಾವಿನ ಮರ ನಿದ್ರಿಸಿರಬಹುದು."

ಅಪ್ಪು ನಾಯರ್ ಸಾಮಾನ್ಯವಾಗಿ ಗಟ್ಟಿಯಾಗಿಯೇ ಮಾತನಾಡುವುದು; ಆಜ್ಞಾಪಿಸುವ ಧ್ವನಿಯಲ್ಲಿ. ಊರಿನಲ್ಲಿ ಯಾವುದೇ ನಾಯರ್ ತರವಾಡು ಮನೆಗಳಲ್ಲಿ ಮದುವೆಯೋ, ಹೆಣ್ಣು ಋತುಮತಿಯಾದಾಗ ನಡೆಸುವ ಶಾಸ್ತ್ರವೋ, ವೈಕುಂಠ ಸಮಾರಾಧನೆಯೋ ಇದ್ದಲ್ಲಿ ಅಪ್ಪು ನಾಯರ್ ಬರುತ್ತಾರೆ. ಅಡುಗೆ ಮನೆಯ ಅಂಗಳವನ್ನು ತನ್ನ ಅಧೀನಪಡಿಸಿಕೊಳ್ಳುತ್ತಾರೆ. ಕೆಲಸದ ಹೆಂಗಸರಿಂದ ಅಂಗಳವನ್ನು ಸೆಗಣಿ ಸಾರಿಸುವ ಕೆಲಸ ಮಾಡಿಸುತ್ತಾರೆ. ಚಪ್ಪರ ಹಾಕಲು ಸಿದ್ಧತೆ ಮಾಡುತ್ತಾರೆ. ದೊಡ್ಡ ದೊಡ್ಡ ಪಾತ್ರೆಗಳನ್ನು ಇಡಲು ಅನುಕೂಲವಾಗುವಂತೆ ಒಲೆಗಳು ನಿರ್ಮಾಣವಾಗುತ್ತವೆ. ಇದನ್ನೆಲ್ಲಾ ಯಾರೂ ಹೇಳಿ ಅವರು ಮಾಡುವುದಲ್ಲ, ಪ್ರತಿಫಲ ಬಯಸದೇ ಮಾಡುವ ಸೇವೆ ಅವರ ಅಧಿಕಾರವಾಗಿತ್ತು.

ಹೊತ್ತು ಚೆನ್ನಾಗಿ ಬೆಳಗಾದಾಗ ಅಪ್ಪು ನಾಯರ್ ಹೇಳಿದರು.

"ಹಾಗಾದರೆ, ಮಾವಿನ ಮರ ಕಡಿಯಿರಿ."


ಚಾತ್ತ ಹಾಗೂ ಕೋತ ಮರದ ಎದುರು ನಿಂತು ನಮಸ್ಕರಿಸುವುದನ್ನು ಅಲ್ಪ ತಮಾಷೆಯೊಂದಿಗೆ ನಾನು ನೋಡುತ್ತಾ ನಿಂತೆ.

ಅನಂತರ ಬುದ್ಧಿ ಬೆಳೆದಾಗಲೇ ಅಪ್ಪು ನಾಯರ್‌ರ ಮಹಾಮನಸ್ಸತೆ ನನಗೆ ಅರಿವಾದದ್ದು. ಮೂವತ್ತೈದು ವರ್ಷಗಳ ಹಿಂದೆ, ಕಟ್ಟಿಗೆ ಮಾರುವ ಅಂಗಡಿಗಳೊಂದೂ ಕೂಡಾ ಹಳ್ಳಿಯಲ್ಲಿ ಇದ್ದಿರಲಿಲ್ಲ. ಆಗ ಅಂತ್ಯಕ್ರಿಯೆ ನಡೆಸಲು ಸ್ವಂತ ಮನೆಯ ಮರವನ್ನೇ ಕಡಿಯಬೇಕಾಗಿತ್ತು. ಮರಗಳ ಮೇಲಿನ ಪ್ರೀತಿ, ಆದರಗಳ ಕಾರಣ, ಈಗಲೂ ಅಪ್ಪು ನಾಯರ್ ನನ್ನ ಮನಸ್ಸಿನಲ್ಲಿ ಜೀವಿಸುತ್ತಾರೆ.

ಉತ್ತರ ದಿಕ್ಕಿನ ಕೋಣೆಯಲ್ಲಿ, ನೆಲದ ಮೇಲೆ ಅಜ್ಜಿಯ ಶರೀರವನ್ನು ಬಟ್ಟೆ ಹೊದಿಸಿ ಮಲಗಿಸಲಾಗಿತ್ತು. ಕೋಣೆಯ ಹೊರಗಿನ ವೆರಾಂಡದ ಮೂಲಕ ಹೋಗುವಾಗ ಒಮ್ಮೆ ನಾನು ನೋಡಿದೆ. ಅನಂತರ ಹೇಗೋ ಓಡಿ ಬಂದು ಹೊರ ಕೋಣೆಯಲ್ಲಿ ಆಶ್ರಯ ಪಡೆದೆ. ನನಗೆ ಚಿಕ್ಕವನಾಗಿರುವಾಗ, ಶವ ಶರೀರಗಳನ್ನು ನೋಡಲು ಭಯವಾಗಿತ್ತು. ಕೋಣೆಯಲ್ಲೂ, ವೆರಾಂಡದಲ್ಲೂ ತುಂಬಾ ಜನ ಹೆಂಗಸರು ಕುಳಿತರು. ಯಾರೋ ರಾಮಾಯಣ ಓದುತ್ತಿದ್ದರು. ಅದ್ಯಾರೆಂದು ನೋಡಲು ನಾನು ಅಲ್ಲಿ ನಿಲ್ಲಲಿಲ್ಲ. ಹೊರ ಕೋಣೆಯಲ್ಲಿ, ಅಮ್ಮ ನೆಲದ ಮೇಲೆ ಹಾಸಿದ ಚಾಪೆಯಲ್ಲಿ ಕುಳಿತಿದ್ದರು. ನಾನು ಅಮ್ಮನ ಪಕ್ಕದಲ್ಲಿ ಕುಳಿತು ಕಿಟಕಿಯಿಂದ ನೋಡಿದೆ.

ಅಪ್ಪು ನಾಯರ್ ಕೂಗಿ ಹೇಳುತ್ತಿದ್ದರು.

"ಮಕ್ಕಳೆಲ್ಲರೂ ಸ್ನಾನ ಮಾಡಿ ಮಡಿ ಬಟ್ಟೆ ಉಟ್ಟು ಬನ್ನಿ, ಮೊಮ್ಮಕ್ಕಳೂ ಕೂಡಾ ಬನ್ನಿ. ಗಂಡಸರು ಮಾತ್ರ ಬಂದರೆ ಸಾಕು. ಒಂದು ಬಾಳೆ ಎಲೆ ಕತ್ತರಿಸಿ ತನ್ನಿ... ಇನ್ನೂ ಸ್ವಲ್ಪ ದೊಡ್ಡದಿರಬೇಕಿತ್ತು. ಪರವಾಗಿಲ್ಲ. ಅನಂತರ ಬಾಕಿ ಉಳಿದದ್ದನ್ನು ಕೂಡಾ ತೆಗೆದಿಡಿ. ವೈಕುಂಠ ಸಮಾರಾಧನೆಗೆ ಬೇಕು. ಬೇಗ ಆಗಲಿ. ಏನು



ನೋಡುತ್ತಾ ನಿಂತಿದ್ದೀರಿ."

ಅಪ್ಪು ನಾಯರ್ ಗಟ್ಟಿ ಧ್ವನಿಯಲ್ಲಿ ಮಾತನಾಡಿದರು.

ಈಗ ಒಂದು ತಮಾಷೆಯೊಂದಿಗೆ, ನಾನದನ್ನು ನೆನಪಿಸಿಕೊಂಡೆ. ಹಿಂದೆಲ್ಲಾ ಜನರು ಇತರರಿಗಾಗಿ ಧ್ವನಿ ಎತ್ತುತ್ತಿದ್ದರು. ಆದರೆ ಇಂದದಲ್ಲ ಸ್ಥಿತಿ. ಅವರವರ ಕೆಲಸ ಕಾರ್ಯಗಳಿಗಾಗಿ ಮಾತ್ರವೇ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಾರೆ .

ಕಿಟಕಿಯಿಂದ ನೋಡಿದಾಗ, ಸೋದರ ಮಾವಂದಿರು ನಾಲ್ಕು ಜನರು ಕೂಡಾ ಸ್ನಾನ ಮಾಡಿ ಮಡಿ ಬಟ್ಟೆಯಲ್ಲಿ ನಿಂತಿದ್ದರು. ಮತ್ತೆ ಪುನಃ ನೋಡಿದಾಗ ಆಶ್ಚರ್ಯವಾಗಿತ್ತು. ಚಿಕ್ಕಮ್ಮನ ಇಬ್ಬರು ಮಕ್ಕಳು, ರಾಜು ಹಾಗೂ ವಾಸು. ಇಬ್ಬರೂ ನನಗಿಂತ ಚಿಕ್ಕವರು. ಅವರ ಜೊತೆ ನಿಂತಿದ್ದರು.

ನನ್ನನ್ನು ಯಾರೂ ನೋಡದಿರಲು ನಾನು ಅಮ್ಮನ ಹಿಂದೆ ಬಚ್ಚಿಟ್ಟುಕೊಂಡಿದ್ದು ನೆನಪಿದೆ. ನಾನು ಮೆಲುದನಿಯಲ್ಲಿ ಅಮ್ಮನೊಡನೆ ಕೇಳಿದೆ.

"ಅವರೆಲ್ಲಾ ಯಾಕೆ ಮಡಿ ಬಟ್ಟೆಯುಟ್ಟು ನಿಂತಿದ್ದಾರೆ?"

"ಅಜ್ಜಿಯ ದೇಹವನ್ನು ಸುಡಲು ಕೊಂಡೊಯ್ಯುತ್ತಾರಲ್ಲ? ಮಕ್ಕಳು ಅದನ್ನು ಮಾಡಬೇಕು."

"ಆದರೆ ರಾಜು ಹಾಗೂ ವಾಸು?"

"ಅವರೂ ಜೊತೆಗೂಡುತ್ತಾರೆ. ಒಟ್ಟಿಗೆ ನಿಂತರೆ ಸಾಕು. ನೀನೂ ಸೇರಬಹುದಲ್ಲಾ. ಇಲ್ಲಿ ಹೀಗೆ ಸುಮ್ಮನೆ ಕುಳಿತಿರುವ ಸಮಯದಲ್ಲಿ ನೀನೂ ಹೋಗಿ ಹಿಡಿಯಲು ಸಹಾಯ ಮಾಡಬಾರದೇ?"

ನಾನು ಭಯದಿಂದ ನಡುಗಿ ಹೋದೆ. ಒಂದು ಹೆಣವನ್ನು ಮುಟ್ಟುವುದು. ಯೋಚಿಸಲು ಕೂಡಾ ಸಾಧ್ಯವಿಲ್ಲ. ಒಮ್ಮೆ ಪಕ್ಕದ ಮನೆಯಲ್ಲಿ ಒಬ್ಬರು ತೀರಿಹೋದ ವಿಷಯ ತಿಳಿದಾಗ ತಂಗಿಯ ಕೈ ಹಿಡಿದುಕೊಂಡು, ಸಾಧಾರಣವಾಗಿ ಹೋಗುತ್ತಿದ್ದ ಕಾಲು ದಾರಿಯ ಬದಲು, ಸುತ್ತಿ ಬಳಸಿ ಗದ್ದೆಯ ಮೂಲಕ ಶಾಲೆ ತಲುಪುವವರೆಗೆ ಓಡಿದ್ದೆ.

ನಾನು ಅಮ್ಮನಿಗೆ ಮತ್ತಷ್ಟು ಒರಗಿ ಕುಳಿತೆ. ಇದ್ದಕ್ಕಿದ್ದಂತೆ ನನ್ನ ಕೈ ಮುಟ್ಟಿ ನೋಡಿ ಅಮ್ಮ ಹೇಳಿದಳು.

"ಇದೇನಿದು?" ನಿನ್ನ ಕೈ ತಣ್ಣಗಿದೆಯಲ್ಲ, ಕೈ ಮಾತ್ರವಲ್ಲ, ದೇಹಪೂರ್ತಿ ತಣ್ಣಗಾಗಿತ್ತು. ಚಳಿ ಸಹಿಸಲು ಸಾಧ್ಯವಾಗದೆ, ನಾನು ಅಮ್ಮನಿಗೆ ಒರಗಿ ಕುಳಿತೆ.

"ಹೀಗೆ ಹೆದರಿಕೊಂಡರೆ ಹೇಗೆ?"

ನಾನು ನಡುಗಲು ಪ್ರಾರಂಭಿಸಿದೆ. ಅಮ್ಮ ನನ್ನನ್ನು ಮಡಿಲಿನಲ್ಲಿ ಮಲಗಿಸಿ, ಮುಖವನ್ನು ತನ್ನ ಎದೆಗೆ ಅವುಚಿಕೊಂಡಳು. ನನಗೆ ಸ್ವಲ್ಪ ಸಮಾಧಾನವೂ, ಬಿಸಿಯೂ ಅನುಭವವಾಯಿತು. ಹೊರಗೆ ಅಪ್ಪು ನಾಯರ್‌ರ ಅಪ್ಪಣೆಗಳು ಗಟ್ಟಿಯಾಗಿ ಮೊಳಗುತ್ತಿದ್ದವು.

ಇಂದು ಮೂವತ್ತೈದು ವರ್ಷಗಳ ಅನಂತರ ನಾನು ಅದನ್ನೆಲ್ಲಾ ನೆನಪಿಸಿಕೊಳ್ಳುತ್ತಿದ್ದೇನೆ. ಅಮ್ಮನ ಎದೆಯ ಬಿಸಿ, ಪ್ರೀತಿಯಿಂದ ನನ್ನನ್ನು ಬಿಗಿಯಾಗಿ ಅಪ್ಪಿ ಹಿಡಿದ ಕೈಗಳ ವಾತ್ಸಲ್ಯವನ್ನೂ ಕೂಡಾ. ಅಮ್ಮನ ದೇಹವನ್ನು ಚಿತೆಯಲ್ಲಿಟ್ಟು ಹತ್ತು ನಿಮಿಷಗಳಾಗಿರಬಹುದು. ಸಹಾಯಕರು ಕಟ್ಟಿಗೆಯನ್ನು ಜೋಡಿಸಿ ಇಡುತ್ತಿದ್ದಾರೆ. ಪರಿಕರ್ಮಿಯ ಶಬ್ದ ಒಂದಿನಿತೂ ಮಾರ್ದವವಾಗಿರಲಿಲ್ಲ, ಬಹಳ ಯಾಂತ್ರಿಕವಾಗಿ, ನಿರ್ವಿಕಾರ ಭಾವದಿಂದ ಆತ ಹೇಳುತ್ತಲಿದ್ದ. ನಾನಾಗ ಅಪ್ಪು ನಾಯರ್‌ರನ್ನು ನೆನೆಸಿಕೊಂಡೆ. ಆದರೆ ಅವರು ಎಂದೋ ಮರಣಿಸಿದ್ದರು.

ಸಂಜೆ ಮಳೆ ಬಂದಿತ್ತು. ಗಾಳಿಯಲ್ಲಿ ತೇವಾಂಶವಿತ್ತು. ಅದು ಧನು ಮಾಸದ ರಾತ್ರಿಯನ್ನು ಹೆಚ್ಚು ತಂಪಾಗಿಸಿತ್ತು. ಮನೆಯಲ್ಲಿ ಸ್ನಾನ ಮಾಡಿ, ಮಡಿ ಬಟ್ಟೆಯುಟ್ಟು ಅನಂತರ ಅಮ್ಮನ ದೇಹವನ್ನು ತಂಗಿಯ ಬಿಕ್ಕಳಿಕೆಯ ನಡುವೆ ಆ್ಯಂಬುಲೆನ್ಸ್‌ನಲ್ಲಿ ತೆಗೆದಿರಿಸಲಾಗಿತ್ತು. ಭಾವ ಹಾಗೂ ಚಿಕ್ಕಮ್ಮನ ಮಕ್ಕಳೂ ಜೊತೆಯಲ್ಲಿದ್ದರು. 'ಭಾರತಪ್ಪುಳ' ನದಿಯ ತೀರದಲ್ಲಿರುವ ಸ್ಮಶಾನವನ್ನು ತಲುಪಿದಾಗ ಪರಿಕರ್ಮಿ ಹೇಳಿದರು.

"ನಾವು ಚಿತೆಯನ್ನು ಸಿದ್ಧಪಡಿಸುತ್ತೇವೆ. ನೀವು ಮೂವರೂ ನದಿಯಲ್ಲಿ ಮುಳುಗೆದ್ದು ಬನ್ನಿ."

ಯಾರೋ ಪೆಟ್ರೋಮ್ಯಾಕ್ಸ್ ಹಚ್ಚಿ ಇಟ್ಟಿದ್ದರು. ವಾಸು ಅದನ್ನು ಹಿಡಿದುಕೊಂಡು ಮುಂದೆ ನಡೆದ. ನೀರಿನ ಸಮೀಪ ತಲುಪಲು, ಮರಳಿನ ಮೇಲೆ ಸ್ವಲ್ಪ ದೂರ ನಡೆಯಬೇಕಾಗಿ ಬಂತು. ಪೆಟ್ರೋಮ್ಯಾಕ್ಸ್‌ನ ಬೆಳಕಿನಲ್ಲಿ ನದಿಯ ನೀರಿನ ಹರಿವು ಕಾಣಬಹುದಾಗಿತ್ತು. ಮಳೆಯಿಂದಾಗಿ ನೀರು ಶುಭ್ರವಾಗಿರಲಿಲ್ಲ.

ಇದ್ದಕ್ಕಿದ್ದಂತೆಯೇ, ಅಮ್ಮ ಆ್ಯಂಬುಲೆನ್ಸ್‌ನಲ್ಲಿ ಒಬ್ಬಳೇ ಮಲಗಿದ್ದಾಳೆಂಬುದು ನೆನಪಾಯಿತು. ಆಂಬ್ಯುಲೆನ್ಸ್ ನಿಂತಿದ್ದ ಕಡೆ ಕತ್ತಲಾವರಿಸಿತ್ತು . ಪೆಟ್ರೋಮ್ಯಾಕ್ಸ್‌ನ ಬೆಳಕಿನಲ್ಲಿ ಆ್ಯಂಬುಲೆನ್ಸ್‌ನ ಮಸುಕಾದ ಆಕೃತಿ ಕಾಣಬಹುದಾಗಿತ್ತು. ಅದರೊಳಗೆ ಅಮ್ಮ ಒಬ್ಬಳೇ ಮಲಗಿದ್ದಾಳೆಂಬುದನ್ನು ನೆನೆಸಿಕೊಂಡಾಗ ಬೇಸರವಾಯಿತು. ಒಂದು ವೇಳೆ ಭಾವ ಕಾವಲು ಕಾಯುತ್ತಿರಬಹುದು. ಬೇಗನೇ ನದಿಯಲ್ಲಿ ಮುಳುಗೆದ್ದೆ.

ನೀರು ಹೆಚ್ಚು ತಂಪಾಗಿರಲಿಲ್ಲ, ಆದರೆ ಮುಳುಗಿ ಎದ್ದಾಗ, ಗಾಳಿಯ ಕಾರಣದಿಂದ ಚಳಿ, ಮುಳ್ಳುಗಳಂತೆ ದೇಹವನ್ನು ಚುಚ್ಚಿ ಪ್ರವೇಶಿಸುತ್ತಿತ್ತು. ಒದ್ದೆಯಾದ ಬೈರಾಸನ್ನು ಸೊಂಟಕ್ಕೆ ಸುತ್ತಿಕೊಂಡು ನಾವು ಸ್ಮಶಾನದ ಕಡೆಗೆ ನಡೆದೆವು.

ಹೊಂಡ ಮಾಡಿಯಾಗಿತ್ತು. ಹೊಂಡದ ಎರಡೂ ಬದಿಯಲ್ಲೂ ಬಾಳೆಗಿಡದ ಕಾಂಡವನ್ನಿಟ್ಟು ಮೇಲೆ ಮರದ ಮೂರು ದಿಮ್ಮಿಗಳನ್ನು ಅಡ್ಡಲಾಗಿ ಇಟ್ಟರು.

ಪರಿಕರ್ಮಿಯ ಶಬ್ದ ಕೇಳಿಸುತ್ತಿತ್ತು.

"ಇನ್ನು ಮೃತದೇಹವನ್ನು ತೆಗೆದುಕೊಂಡು ಬನ್ನಿ."

ನಾವು ಅಮ್ಮನ ಶರೀರವನ್ನು ತೆಗೆದುಕೊಂಡು ಬಂದೆವು.

ಇನ್ನು ದೇಹವನ್ನು ಎತ್ತಿಕೊಂಡು ಚಿತೆಗೆ ಪ್ರದಕ್ಷಿಣೆ ಬರಬೇಕು. ಮೂರು ಬಾರಿ. ತಲೆಯನ್ನು ದಕ್ಷಿಣಕ್ಕೇ ಹಿಡಿಯಬೇಕು. ಆ.... ಇನ್ನು ಅಲ್ಲಿ ಮರದ ದಿಮ್ಮಿಯ ಮೇಲಿಡಿ.

ನಾನು ತಲೆಯ ಭಾಗದಲ್ಲಿ ಹಿಡಿದುಕೊಂಡಿದ್ದೆ. ರಾಜು ಹಾಗೂ ವಾಸು ನಡುವಿನ ಭಾಗದಲ್ಲಿ ಹಾಗೂ ಕಾಲಿನ ಭಾಗದಲ್ಲಿ ಹಿಡಿದಿದ್ದರು. ತಲೆಯನ್ನು ಮರದ ದಿಮ್ಮಿಯ ಮೇಲೆ ಇಟ್ಟಾಗಲೇ ನನಗೆ ಕಾಣಿಸಿದ್ದು, ದಿಮ್ಮಿಯ ಮೇಲೆ ಒಂದು ಚೂಪಾದ ಭಾಗವಿರುವ ಕಡೆಯೇ ಅಮ್ಮನ ತಲೆಯನ್ನು ಇಟ್ಟಿದ್ದು. ನಾನು ತಲೆಯನ್ನು ಸ್ವಲ್ಪ ಎತ್ತಿ ದಿಮ್ಮಿಯನ್ನು ತಿರುಗಿಸಿ ನುಣ್ಣಗಿರುವ ಭಾಗವನ್ನು ನೋಡಿ ಇಟ್ಟೆ.

"ಆ, ಅದೇನೂ ಪರವಾಗಿಲ್ಲ, ಸತ್ತು ಹೋದವರಿಗೆ ನೋವಾಗುವುದಿಲ್ಲ." ಪರಿಕರ್ಮಿ ಹೇಳಿದರು.

ಅದೂ ಸರಿಯೇ. ನಾನು ನೆನಪಿಸಿಕೊಂಡೆ. ಪರಿಕರ್ಮಿಯ ಮಾತುಗಳು ಮೃದುವಾಗಿಲ್ಲದಿದ್ದರೂ, ನಿಜವಾಗಿದ್ದವು. ಅಮ್ಮ ಕಾಯಿಲೆಗಳ, ವೇದನೆಗಳ ಲೋಕದಿಂದ ಹೋಗಿಯಾಗಿದೆ. ಆದರೆ ಅದನ್ನು ಹೇಳಿದ್ದರಿಂದ ನಾನು ಪರಿಕರ್ಮಿಯನ್ನು ದ್ವೇಷಿಸಿದೆ.

"ಮಗ ಇಲ್ಲಿಗೆ ಬರಬೇಕು." ಕೈಯಲ್ಲಿ ಹೂಗಳನ್ನು ಕೊಟ್ಟು ಪರಿಕರ್ಮಿ ಹೇಳಿದರು. "ಮರಣ ಹೊಂದಿದ ವ್ಯಕ್ತಿಯನ್ನು ಸ್ಮರಿಸಿಕೊಂಡು ಹೂಗಳನ್ನು ದೇಹದ ಮೇಲೆ ಇಡಬೇಕು."

ಮರಣ ಹೊಂದಿದ ವ್ಯಕ್ತಿ ನನ್ನ ಅಮ್ಮನೇ. ನಾನು ಆಲೋಚಿಸತೊಡಗಿದೆ. ಮರಣ ಹೊಂದಿದ ವ್ಯಕ್ತಿ ಎನ್ನುವ ಬದಲು ಅಮ್ಮನನ್ನು ಸ್ಮರಿಸಿ ಎಂದು ಪರಿಕರ್ಮಿ ಹೇಳಿದ್ದರೆ.

"ಚೊಂಬಿನಲ್ಲಿ ನೀರು ತೆಗೆದುಕೋ... ಸ್ಮರಿಸು... ಪಾದ ಮುಟ್ಟಿ ನಮಸ್ಕರಿಸು."

ಪರಿಕರ್ಮಿಯ ಶಬ್ದ ಯಾಂತ್ರಿಕವಾಗಿ ಬರುತ್ತಿತ್ತು. ಆತನ ಸಹಾಯಕರು ಅಮ್ಮನ ದೇಹದ ಮೇಲೆ ಕಟ್ಟಿಗೆ ಜೋಡಿಸಿಡಲು ಆರಂಭಿಸಿದ್ದರು. ಪರಿಕರ್ಮಿ ಕಟ್ಟಿಗೆಯ ಕೊಳ್ಳಿಯೊಂದನ್ನು ತುಂಡರಿಸಿ ತೆಗೆದು ಅದಕ್ಕೆ ಬಟ್ಟೆಯನ್ನು ಸುತ್ತಿ ದೊಂದಿಯನ್ನು (ಪಂಜು) ಮಾಡುತ್ತಿದ್ದರು. ಮೂರು ದೊಂದಿಗಳನ್ನು ಮಾಡಿ ಅವುಗಳನ್ನು ಎಣ್ಣೆಯಲ್ಲಿ ಮುಳುಗಿಸಿ ತೆಗೆದರು. ಅಷ್ಟರಲ್ಲಿ ಚಿತೆ ತಯಾರಾಗಿದ್ದಿತು.

"ಮಗ ಇಲ್ಲಿಗೆ ಬರಬೇಕು." ಒಂದು ದೊಂದಿಯನ್ನು ನನ್ನ ಕೈಯಲ್ಲಿ ಕೊಟ್ಟು ಪರಿಕರ್ಮಿ ಹೇಳಿದರು. "ಇದಕ್ಕೆ ಕಾಲುದೀಪದಿಂದ ಬೆಂಕಿಯನ್ನು ಹಚ್ಚಿಸಿ ತಲೆಯ ಭಾಗಕ್ಕೆ ಅಗ್ನಿ ಸ್ಪರ್ಶ ಮಾಡು." ಇನ್ನುಳಿದ ಎರಡು ದೊಂದಿಗಳನ್ನು ರಾಜು ಹಾಗೂ ವಾಸುವಿನ ಕೈಯಲ್ಲಿ ಕೊಟ್ಟರು.

ಅಲ್ಲಿ ಒಳಗಡೆ ಇಟ್ಟುಬಿಡಿ. ಒಣಗಿದ ತೆಂಗಿನ ಕಾಯಿಯ ಸಿಪ್ಪೆಗಳಿಗೆ ಬೆಂಕಿ ಹೊತ್ತಿಕೊಳ್ಳಲಿ. ನಿಮ್ಮಿಬ್ಬರಲ್ಲಿ ಒಬ್ಬರು ನಡುಭಾಗದಲ್ಲೂ, ಮತ್ತೊಬ್ಬರು ಕಾಲಿನ ಭಾಗದಲ್ಲೂ ಇಟ್ಟುಬಿಡಿ. ಹಾ..." ಹಾಗೆಯೇ.

ಚಿತೆ ಉರಿಯತೊಡಗಿತು. ಹಿಂಭಾಗದಿಂದ ಗಾಳಿ ಬೀಸತೊಡಗಿತು. ಕಟ್ಟಿಗೆ ಜೋಡಿಸಿಟ್ಟಿದ್ದರಿಂದ ಬಟ್ಟೆಯಿಂದ ಮುಚ್ಚಿದ್ದ ಶರೀರವನ್ನು ನೋಡಲು ಸಾಧ್ಯವಾಗಲಿಲ್ಲ, ಆದರೆ ಅಮ್ಮ ಅಲ್ಲಿಯೇ ಇದ್ದಾರೆಂಬ ಪರಿಜ್ಞಾನವಿದ್ದಿತು.

ಮಳೆ ಇನ್ನು ಬರುವುದಿಲ್ಲ,

ಯಾರೋ ಆಕಾಶದ ಕಡೆಗೆ ನೋಡಿ ಹೇಳಿದರು. ಮೋಡಗಳು ಜಾರಿಹೋಗತೊಡಗಿದ್ದವು. ನಕ್ಷತ್ರಗಳು ಮಿನುಗತೊಡಗಿದ್ದವು.

ಮಳೆ ನಿಂತಿದ್ದರೂ, ಗಾಳಿ ಬಹಳ ತಂಪಾಗಿದ್ದಿತು . ಮಡಿ ಬಟ್ಟೆಯಲ್ಲಿದ್ದ ಕಾರಣ ಚಳಿ ದೇಹದಿಂದ ಬಿಟ್ಟು ಹೋಗದೇ ನಿಂತಿತ್ತು. ಪರಿಕರ್ಮಿಯ ಸಹಾಯಕರು ಚಿತೆಯ ಸುತ್ತಲೂ ಸುತ್ತುತ್ತಾ ಬೆಂಕಿ ಹಚ್ಚುತ್ತಿದ್ದರು. ಬೆಂಕಿ ತುಂಬಾ ವೇಗವಾಗಿ ಹೊತ್ತಿ ಉರಿಯುತ್ತಿತ್ತು.

"ಇನ್ನು ನೀವು ಕುಳಿತುಕೊಳ್ಳಿ," ಪರಿಕರ್ಮಿ ಹೇಳಿದರು.

ಬೆಂಕಿ ಚೆನ್ನಾಗಿ ಹಿಡಿದ ಮೇಲೆ ಹೋಗಬಹುದು.

ಮರದ ಕೊಳ್ಳಿಗಳು ಒಂದೊಂದಾಗಿ ಬೆಂಕಿ ಹೊತ್ತಿಕೊಳ್ಳುವುದನ್ನು ನೋಡಿ ನಾವು ಒಂದು ನೇಯ್ದ ತೆಂಗಿನ ಮಡಲಿನ ಮೇಲೆ ಕುಳಿತೆವು. ಕ್ರಮೇಣ ಚಳಿ ದೂರವಾಗುತ್ತಿರುವುದು ಸಮಾಧಾನದೊಂದಿಗೆ ನಾನು ಅರಿತುಕೊಂಡೆ. ಬೆಂಕಿಯ ಶಾಖ ನನ್ನ ಮಡಿವಸ್ತ್ರಗಳನ್ನು ಒಣಗಿಸಲು ಆರಂಭಿಸಿತು. ಬಿಸಿಯು ದೇಹದೊಳಕ್ಕೆ ಹೊಕ್ಕು ಚಳಿ ದೂರವಾಯಿತು. ಅಮ್ಮ ಅದೃಶ್ಯವಾದ ಕೈಗಳಿಂದ ಆಲಿಂಗನ ಮಾಡುವಂತೆ. ನಾನು ಚಿಕ್ಕವನಾಗಿದ್ದಾಗ, ಅಜ್ಜಿಯ ಮರಣದ ಸಮಯದಲ್ಲಿ ಅಮ್ಮ ನನ್ನನ್ನು ಅಪ್ಪಿಕೊಂಡು ನನ್ನ ಭಯ ಹಾಗೂ ಚಳಿಯನ್ನು ಹೋಗಲಾಡಿಸಿದ್ದು

ಪಿಗೆ ಬಂತು. ಇಂದೂ ಕೂಡಾ ಚಿತೆಯ
ೀಲಿನಿಂದ ಅಮ್ಮ ಬಿಸಿ ಹಾಗೂ ಪ್ರೀತಿಯನ್ನು ನನಗೆ
ತಿ ನನ್ನನ್ನು ಸಮಾಧಾನಪಡಿಸಲು ಶ್ರಮಿಸುತ್ತಿದ್ದಾಳೆ.
"ಗಂಟೆ ಎಷ್ಟಾಯಿತು?"
ಯಾರೋ ವಾಚ್ ನೋಡಿ ಹೇಳಿದರು.
ಂಬತ್ತೂ ಕಾಲು. ನೀವು ಮೂವರೂ ನದಿಯಲ್ಲಿ
ಳುಗೆದ್ದು ಬನ್ನಿ. ಅನಂತರ ಹೊರಡೋಣ."
ನದಿಯ ನೀರಿನ ತಂಪು ಹೆಚ್ಚಾಗಿದ್ದಿತು.
ಲ್ಲಿಯವರೆಗೆ ಬೆಂಕಿಯ ಶಾಖದ ಬಳಿ ನಿಂತಿದ್ದರಿಂದ
ಗ ಚಳಿ ಹೆಚ್ಚು ಕಠಿಣವಾಗಿ ಅನಿಸತೊಡಗಿತ್ತು.
ಂದು ಮಡಿ ಬಟ್ಟೆಯಲ್ಲಿ ನದಿಯಿಂದ ಮೇಲಕ್ಕೆ
ದಾಗ ಚಿತೆ ಹೊತ್ತಿ ಉರಿಯುತ್ತಿತ್ತು. ಬೆಂಕಿಯ
ಲೆಗಳು ಜೋಡಿಸಿಟ್ಟ ಕಟ್ಟಿಗೆಯ ತುಂಡುಗಳನ್ನು
ರ್ತಿಯಾಗಿ ಆವರಿಸಿಕೊಂಡಿತ್ತು. ನಾನು ಹತ್ತಿರಕ್ಕೆ
ೀಗಲಿಲ್ಲ. ಇಷ್ಟು ದೂರದಿಂದಲೂ, ಚಿತೆಯಿಂದ
ದ ಬಿಸಿಯು ನನ್ನ ಚಳಿಯನ್ನು ದೂರ ಮಾಡಿ
ಗೆ ಸಮಾಧಾನ ನೀಡಿತು.
ಏಳನೆಯ ದಿವಸ ಸಂಚಯನಂ. ಅಂದರೆ
ಸ್ಥಿಗಳನ್ನು ಸಂಗ್ರಹಿಸುವ ದಿನ. ನಾನೂ, ವಾಸುವೂ
ಗೂ ಪರಿಕರ್ಮಿ ಮಾತ್ರವೇ ಅಲ್ಲಿ ಇದ್ದದ್ದು.
ಮಡಿಯುಟ್ಟು, ತಣ್ಣಗಾಗಿದ್ದ ಚಿತೆಯ ಬಳಿ ಅಸ್ಥಿ ಸಂಗ್ರಹಿಸಲು ಕುಳಿತಾಗ ನಾನು ಪುನಃ ಅಮ್ಮನನ್ನು ನೆನೆಸಿಕೊಂಡೆ. ಈ ಏಳು ದಿನಗಳಲ್ಲಿ ಯಾಕೋ ಏನೋ ಅಮ್ಮ ಹೆಚ್ಚಾಗಿ ನನ್ನ ಮನಸ್ಸಿಗೆ ಬಂದಿರಲಿಲ್ಲ. ಅಮ್ಮನ ಜೀವನ ಒಂದು ರೀತಿ ಚೆನ್ನಾಗಿಯೇ ಇತ್ತು. ಸಾರ್ಥಕವೆಂದೇ ಹೇಳಬಹುದಾಗಿದ್ದ ಜೀವನ. ಎಪ್ಪತ್ತನೆಯ ವಯಸ್ಸಿನಲ್ಲಿ ಸಹಜವಾಗಿ ಕೊನೆಗೊಂಡಿದ್ದರಲ್ಲಿ ಬಹಳವಾಗಿ ನೊಂದುಕೊಳ್ಳುವ ವಿಷಯವೇನೂ ಇಲ್ಲ. ಒಂದು ವಾರ ಮಾತ್ರ ಕಾಯಿಲೆಯಿಂದ ಮಲಗಿದ್ದುದು. ಮರಣದ ಸಮಯದಲ್ಲಿ ಮಕ್ಕಳು ಕೂಡ ಸಮೀಪದಲ್ಲಿದ್ದರು.

ಪರಿಕರ್ಮಿಯ ಶಬ್ದ ಹಿಂಬದಿಯಿಂದ ಕೇಳುತ್ತಿತ್ತು.

ಸಾಧ್ಯವಾದಷ್ಟು ಅಸ್ಥಿಗಳನ್ನು ಸಂಗ್ರಹಿಸಿಕೊಳ್ಳಿ.

ಬೂದಿಯಲ್ಲಿ ಹುಡುಕಾಡುವಾಗ ಆ ಮೂಳೆ ದೊರೆಯಿತು. ಕೈಯ ಎಲುಬು. ಉಳಿದ ಮೂಳೆಗಳೆಲ್ಲಾ ಒಂದು ರೀತಿ ಕರಗಿ ಹೋಗಿದ್ದವು. ಚಿತೆಯ ಬೆಂಕಿ ಅದರ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿತ್ತು. ಈ ಎಲುಬು ಮಾತ್ರ ನಾಶವಾಗದೇ, ಬಿಳಿಯಾಗಿ ಬೂದಿಯ ಅಡಿಯಲ್ಲಿ ಇದ್ದಿತ್ತು. ನಾನು ಕೂಡಲೇ ಅಮ್ಮನ ಮೃದುವಾದ ಕೈಗಳನ್ನು ನೆನಪಿಸಿಕೊಂಡೆ.

ಬಹಳ ಚಿಕ್ಕವನಾಗಿದ್ದಾಗ ಘಟಿಸಿದ್ದು ಅದು. ಒಮ್ಮೆ ಜ್ವರ ಬಂದು ಮಲಗಿದ್ದೆ. ಶರೀರವಿಡೀ ನೋವಿನಿಂದ ನಾನು ಮಲಗಿದ್ದಾಗ ಅಮ್ಮ ಬಂದಿದ್ದಳು. ದೇಹವಿಡೀ ನೋಯುತ್ತಿದೆ ಎಂದು ನಾನು ಹೇಳಿದಾಗ ಅಮ್ಮ ನನ್ನ ಎದೆಯನ್ನು ನೇವರಿಸತೊಡಗಿದಳು. ಬಹಳ ಸಮಾಧಾನ ಉಂಟಾಗಿತ್ತು. ತುಂಬಾ ಹೊತ್ತು ನೇವರಿಸಿದ್ದಿರಬಹುದು. ನಾನು ಆ ಸುಖದಲ್ಲಿ ನಿದ್ರೆ ಮಾಡಿದ್ದೆ.

ಈ ಬಿಳಿಯ ಅಸ್ಥಿಯನ್ನು ನೋಡುತ್ತಿರುವಾಗ, ನಾನು ಪುನಃ ಒಂದು ಮಗುವಾಗಿ ಬದಲಾಗಿದ್ದೆ. ಒಂದು ತಂಪಾದ ಗಾಳಿ ಬೀಸಿತು. ನಾನು ನಡುಗಲು ಆರಂಭಿಸಿದ್ದೆ. ನಡುಗುವ ಎದೆಯಿಂದ ಒಂದು ಬಿಕ್ಕಳಿಕೆ ಹೊರಬಂದಿದ್ದನ್ನು ನಾನೇ ಅರಿಯಲಿಲ್ಲ. ಈ ಚಳಿಯನ್ನು ದೂರ ಮಾಡಲೂ, ಪ್ರೀತಿಯ ಬಿಸಿಯನ್ನು ನೀಡಲೂ ಅಮ್ಮ ಈಗ ಇಲ್ಲವೆಂಬ ಪ್ರಜ್ಞೆ ಉಂಟಾಗಲು, ನನ್ನ ಬಿಕ್ಕಳಿಕೆಯು ಒಂದು ಗಟ್ಟಿ ಧ್ವನಿಯ ಆರ್ತನಾದವಾಗಿ ಬದಲಾಯಿತು.

# ಬೇಲೇಕೇರಿಯಲ್ಲಿ...

*ತೀರದ ಅಲೆಗಳ ಮೊರೆತ*
*ಬೇಲೇಕೇರಿಯಲ್ಲಿ*

*ಪಾದವೂರಿದರೆ ಹೆಜ್ಜೆ*
*ಕಾಣಿಸಿ ಅರೆ ಕ್ಷಣದಲ್ಲಿ*
*ಮರಳು ಮುಚ್ಚಿ ಏನೂ*
*ಆಗಿಲ್ಲವೆಂಬಂತೆ ತಮ್ಮ ಪಾಡಿಗೆ*
*ತಾವಿರುವ ಅಲೆಗಳ ಕಳ್ಳಾಟ*
*ನೊರೆನೊರೆಯಾಗಿ ತೇಲಿ*
*ಗಂಧ ಹರಡಿ ಕರೆಯುತಿದೆ*
*ಎಲ್ಲರನ್ನು*
*ಅನಾದಿಯಿಂದಲೂ...*

*ಸಿನಿಮಾದ ನಾಯಕ ನಾಯಕಿ*
*ಕೈ ಹಿಡಿದು ಕುಣಿದಾಡುವುದನು*
*ನೋಡಿದ ದಂಡೆಗೆ*
*ಅವರ ಕುಣಿತ*
*ನಿರ್ದೇಶಕರ ಕಟ್ ಕಟ್ ಶಬ್ದದ ಮಿಡಿತ*
*ಇನ್ನೂ ನೆನಪಿದೆ*
*ಬಾವಿಕೇರಿ ಬದಿಗಿಂದ ಬಂದ*
*ಬುದ್ದು ಗೌಡ ಗುಮಟೆ ಬಾರಿಸುತ್ತ*
*ಯಾರ ಕಡೆಯೂ ನೋಡದೆ*
*ದಂಡೆಯ ಸಿಹಿನೀರ ಬಾವಿಯ*
*ಕುರುಹುಗಳ*
*ದಾಟಿ ನಡೆದು ಹೋದ*
*ಗುರುತಿದೆ ಅದಕೆ*

*ಅರಮನೆಯಂತಹ ಬಂಗ್ಲೆ ತನ್ನ ತಾನು*
*ಮುರಿದುಕೊಂಡು ನೆಲಸಮವಾದರೂ*
*ನೆಲಗಟ್ಟಿನ ಕಲ್ಲು ಅಲ್ಲಲ್ಲೇ ಹರಡಿಕೊಂಡು*
*ಪರಿಚಯಸ್ಥರೊಡನೆ ಕಥೆ ಹೇಳುತ್ತಿವೆ*
*ದೊಡ್ಡವರೆಲ್ಲ ಬಂದುಂಡು*
*ಮಲಗೆದ್ದು ಹೋದ ನೆನಪನ್ನು*
*ಹಾಡುವುದನು ಬಿಡುವುದಿಲ್ಲ*
*ಈಗೀಗಂತೂ*
*ಸಂಜೆಯಾದರೆ ಸಾಕು*
*ಬೆಳ್ಳಕ್ಕಿಗಳು ಹಾರಿ*
*ಹಾರವಾಡಾ ಬದಿಗಿನ ಗಾಳಿ ಮರವನು*
*ಪ್ರೀತಿಸುವುದನ್ನು ನೋಡಿದೆ ಅದು*

*ಕೇಶವಣ್ಣ, ಹಿರೀಕರ ಹೆಸರಲ್ಲಿ*
*ನೆಡೆಸಿದ ನೆನಪಿನ ಗಿಡಗಳು*
*ಚಿಗುರೊಡೆದು ಮೆಲ್ಲಗೆ*
*ದಂಡೆ ನೋಡುತ್ತಿರುವುದು*
*ಮೈ ಬೆಳೆಸಿಕೊಂಡ ಆಲ ಹೊನ್ನೆಗೆ*
*ಕಸಿವಿಸಿಯಾಗಿದೆ*
*ಅವುಗಳ ಕಾಲ ಬುಡದಲ್ಲಿ ಬಲೆಗಳ*
*ಹರಡಿಕೊಂಡು ಹೊಲಿಯುತ್ತ*
*ಕುಳಿತ ಖಾರ್ವಿಗಳ ಬೆವರ ಬಿಸಿ*
*ಸಮುದ್ರದಲೆಗಳ ಜೊತೆ*
*ಔಟಾಗುವ ಆಟ ಆಡುತಿದೆ*
*ಗುಲಾಬಿಯಾಗಿ ಅರಳಿದ ಕಾಗದದ*
*ಹೂಗಳು ಸಂಜೆ ಪಟ್ಟಾಂಗ ಹೊಡೆಯಲು*
*ಬರುವ ನಾರೇಣ ಎಂಕಣ್ಣ*
*ಬೊಗ್ರಿಗದ್ದೆಯ ಜಾನು ಸುಕ್ರವಿನ*
*ಸೈಕಲ ಗಾಡಿಯ ಕಾಯುತ್ತಿವೆ*
*ಯಾರೂ ಇಲ್ಲದ್ದು ನೋಡಿ*
*ಹಾಸುಗಲ್ಲಿನ ಮೇಲೆ ಅರೆಕ್ಷಣ ಕುಳಿತು*
*ಹಾರುವ ಕಾಗೆಗಳಿಗೆ ಬಹಳ ಹೊತ್ತು*
*ನಿಲ್ಲಲು ಮನಸ್ಸಾಗುವುದೇ ಇಲ್ಲ*
*ಬೋಟಿ ನಿಲ್ಲುವಲ್ಲಿ ಬಿಸಿಲಿಗೆ ಮೈ*
*ಕಾಯಿಸಿಕೊಳ್ಳುತ್ತಿರುವ ಮೀನ ವಾಸನೆ*
*ಅವುಗಳ ಹೆಸರನ್ನೇ ಕರೆದಂತಿದೆ*
*ಹೇರಿಕಟ್ಟಿನಲ್ಲಿ ದಿನವಿಡಿ ಮುಳುಗೆದ್ದು*
*ಬಂದ ಹೊರ್ಸನಕ್ಕಿ, ಮುಸ್ಸಂಜೆ ಹೊತ್ತಿಗೆ*
*ಬ್ಯಾಲಿ ಬದಿಗೆ ಹೋಗುವುದನ್ನು*
*ಮರೆಯುವುದಿಲ್ಲ*
*ಜೈನಬೀರ ಕಾನಬೀರ ಈಶ್ವರ ಗಣಪತಿ*
*ಶಾಂತಾದುರ್ಗಿಯರಿಗೆ ದತ್ತಾತ್ರೇಯನ*
*ಹೆಸರಿಡಿದು ಕೂಗಿದ್ದು ಸಾಕಾಗಿದೆ*
*ಅಲೆಗಳ ಮೊರೆತ ಬಿಟ್ಟು ಅವನಿಗೇನೂ*
*ಕೇಳಿಸದು ಎಂಬುದು ಎಲ್ಲರಿಗೂ*
*ಗೊತ್ತಾದಂತಿದೆ*
*ಅದಕೆ ಆಚೆಕೇರಿ ಸಣ್ಣಮ್ಮ ಅವನ ಬದಿಗೆ*
*ಮುಖ ಮಾಡಿ ಹೇಳಿಕೊಳ್ಳುತ್ತಿದ್ದಾಳೆ*
*"ಜಗದ ಕರೆಯನ್ನು ಆಲಿಸು ದ್ಯಾವ್ರೆ"*

*ಎಲ್ಲರನ್ನು ಒಳಗೊಂಡ ಹೆಜ್ಜೆಗಳು ಮಾತ್ರ*
*ಮೆಟ್ಟಿಲು ಪಟಪಟನೆ ಇಳಿದು*
*ಕಡಲ ಕಡೆಗೆ ಓಡುತ್ತಿವೆ*
*ಬ್ಯಾಲಿಬಳ್ಳಿ ಹೂವಾಗುವುದನ್ನು*
*ಕಾಯುತ್ತಿದ್ದ ಬೋಟಿಗಳು*
*ಬಲೆಗೆ ಬರಪೂರ್ ಬಂಗಡೆ ಬೀಳುವ*
*ಕನಸು ಕಾಣುತ್ತಿವೆ*
*ಹುಣ್ಣಿ ಅಮಾಸಿ ದಾಟಿದಂತೆಲ್ಲ*
*ಚಿಪ್ಪಿಕಲ್ಲು ನೀಲಿಕಲ್ಲುಗಳ*
*ಕಿವಿಗೆ ಮತ್ತೆ ಮತ್ತೆ*
*ಕೇಳುತ್ತಲೆ ಇದೆ*
*ತೀರದ ಅಲೆಗಳ ಮೊರೆತ*
*ಬೇಲೇಕೇರಿಯಲ್ಲಿ*

❑ **ಅಕ್ಷತಾ ಕೃಷ್ಣಮೂರ್ತಿ**